So far as the method of giving State aid is concerned, my suggestion is this. The Planning Commission has set up in some States what are called work orientation centres for small scale and village industries. The idea is to give training to certain persons so that after receiving training they must be in a position to set up their own industries. Such work orientation centres ought to be set up in our State. For that also there must be provision in the Bill. Further the State aid should not be confined to giving only monetary aid.

Section 13 speaks of control over the conduct of the business enterprise. The idea should not be only control. The aim should be to have an efficient management of the industries and not merely insist on control. If you go with the slogan of only control of your vested interests inside a particular establishment, that may not be the safest way. Surely, that is not the surest way of promoting efficient management of an industrial enterprise which can be developed at a later stage to stand on its own legs.

Then, section 24 provides for industrial education. I think the wording 'industrial education' is not proper. Instead of that it should be 'modern technical business management'. 'Industrial education' is just nothing. It should be clearly defined as business management.

Lastly, as my friend has already pointed out, there is the need for very careful vigilance in respect of the administration of this Act. I endorse his views that loan applications should be speedily disposed of.

With these words, I close.

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮಿ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಸ್ವಾಗತಿಸುತ್ತ ಇದರ ಮೇಲೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಅಗತ್ಯವಾಗಿದೆ. ಸರ್ಕಾರದವರು ಕೈಗಾರಿಕೆಗಳ ಪ್ರಗತಿಗೆ ಸಾಕಷ್ಟು ಸಹಾಯ ಮಾಡಬೇಕು ಎನ್ನುವ ಘನೋದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ಈ ಮಸೂದೆಯಲ್ಲಿ ಹೇಳಿರುವ ಹಾಗೆ 1951ನೆಯ ಇಸವಿಯಿಂದ ವ್ಯವಸ್ಥಿತವಾದ ಕೈಗಾರಿಕೆಗಳಿಗೆ ಕಾನೂನು ಪ್ರಕಾರವಾಗಿ ಸಹಾಯ ಮಾಡುತ್ತೇರಿ. ಇದಕ್ಕಿಂತ ಹಿಂದೆಯೂ ಕೂಡ ಮೈಸೂರು ಸರ್ಕಾರದವರು ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದಾರೆ. ಸಾಕಷ್ಟು ಸುಲಭ ಬಡ್ಡಿದರದ ಮೇಲೆ ಧನಸಹಾಯವನ್ನು ಕೂಡ ಕೊಟ್ಟಿದ್ದಾರೆ. ನನಗೆ ತಿಳಿದಿರುವ ಹಾಗೆ ಮೈಸೂರು ದೇಶದಲ್ಲಿರುವ ಹಲವು ಖಾಸಗಿ ಕೈಗಾರಿಕೆಗಳು ಇವೊತ್ತು ವ್ಯವಸ್ಥಿತವಾಗಿ ನಡೆಯುತ್ತಿರುವುದಕ್ಕೆ ಸರ್ಕಾರದ ಪ್ರೋತ್ಸಾಹವೇ ಕಾರಣ. ಇನ್ನೂ ಹೆಚ್ಚು ವ್ಯವಸ್ಥಿತವಾಗಿ ಅವರ ಆವಶ್ಯಕತೆಗಳಿಗೆ ಸಾಕಾಗುವಷ್ಟು ಸಾಲ ಕೊಡಬೇಕಾದದ್ದು ಅಗತ್ಯ. ಈ ನೀತಿಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒಂದು ಕಾನೂನನ್ನು ಮಾಡಬೇಕಾದುದು ಕೂಡ ಅಗತ್ಯವಾಗಿದೆ. ಹೀಗೆ ಮೈಸೂರು ದೇಶದ ಇತರ ಭಾಗಗಳಾದ ಮದರಾಸು, ಬೊಂಬಾಯಿ, ಕೊಡಗು, ಹೈದರಾಬಾದು ಪ್ರಾಂತಗಳಿಂದ ಬಂದಿರುವ ಭಾಗಗಳಿಗೂ ಕೂಡ ಈ ಸೌಲಭ್ಯವನ್ನು ಒದಗಿಸಿಕೊಡಬೇಕಾದುದು ಅಗತ್ಯ. ಇದಕ್ಕಾಗಿ ಒಂದು ಸಮಗ್ರವಾದ ಶಾಸನವನ್ನು ಮಾಡುವುದು ಸೂಕ್ತವಾಗಿದೆ. ಸರ್ಕಾರದ ಈ ನೀತಿಯನ್ನು ಪ್ರಶಂಸಿಸುತ್ತೇನೆ. ಇದೇ ನೀತಿಯನ್ನು ಇದಕ್ಕಿಂತಲೂ ಹೆಚ್ಚು ಅರ್ಹವಾಗಿರುವ ವ್ಯವಸಾಯಗಾರರಿಗೂ ಕೂಡ ಏಕೆ ಅನ್ವಯಿಸಿ ಇಷ್ಟೊಂದು ಧಾರಾಳವಾಗಿ ಸಹಾಯ ಒದಗಿಸುವುದಕ್ಕೆ ಪ್ರಯತ್ನ ನಡೆದಿಲ್ಲವೆನ್ನುವುದು ಒಂದು ಚರ್ಚಾಸ್ಪದವಾದ ವಿಷಯ. ಸ್ವಾಮಿ, ಕೈಗಾರಿಕೆಗಳಿಗೆ ನನಗೆ ತಿಳಿದಹಾಗೆ ಶೇಕಡ ಐದು ರೂಪಾಯಿ ಮತ್ತು ಅದಕ್ಕಿಂತಲೂ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಕೊಡುತ್ತಾರೆ. ಇತರರಿಗೆ ಸಹಸ್ರಾರು, ಲಕ್ಷಾಂತರ ರೂಪಾಯಿಗಳ ಸಾಲ ಒದಗಿಸುತ್ತಾರೆ. ಇದು ಅಗತ್ಯ, ಈ ಪ್ರೋತ್ಸಾಹ ಕೊಡುತ್ತಿರುವುದಕ್ಕೆ ನಾನು ಆಕ್ಷೇಪಣೆಮಾಡುತ್ತಿಲ್ಲ. ಇದೇ ರೀತಿ ವ್ಯವಸಾಯಗಾರರಿಗೂ ಸಾಲವನ್ನು ಒದಗಿಸಿಕೊಡುತ್ತಿದ್ದಾರೆಯೇ ಎಂದು ನಾವು ಪರಿಶೀಲಿಸಬೇಕಾದುದು ಅಗತ್ಯ. ಕೈಗಾರಿಕೆಗಳಿಗೆ ಸಾಲ ಕೊಡುವಾಗ ಅದರ ಸಂಬಂಧವಾಗಿರುವ ಪೂರ್ಣ ಆಸ್ತಿಯ ಬೆಲೆಯ ಮೇಲೆ ಶೇಕಡ 75ರಷ್ಟು ಸಾಲ ಕೊಡಬಹುದೆಂದಿದೆ, ಆ ಆಸ್ತಿಯಲ್ಲಿ ಬಹುಭಾಗ ಮೆಷಿನರಿಕೂಡ ಸೇರಿದೆ. ಅದೇ ರೈತ ತಾನು ಋಣಮುಕ್ತನಾಗುವುದಕ್ಕೆ ಸಾಲಕ್ಕೆ ಅರ್ಜಿ ಹಾಕಿದರೆ ಶೇಕಡ ಏಳರಂತೆ ಆತನ ಆಸ್ತಿಯ ಬೆಲೆಯ ಅರ್ಧಕ್ಕೆ ಮೀರದಂತೆ ಹಣ ಒದಗಿಸುತ್ತಾರೆ. ಅದನ್ನು ಕೊಡಬೇಕಾದರೆ, ಆ ಸಾಲ ಒದಗಿಸಬೇಕಾದರೆ ಆ ರೈತ, ಏನೂ ತಿಳಿಯದ ರೈತ, ತಂದು ಒದಗಿಸಬೇಕಾದ ದಾಖಲೆಗಳ ವಿಷಯವನ್ನು ನೋಡಿದರೆ, ಕೋರ್ಟುಗಳಿಗಾದರೂ ರುಜುವಾತು ಕೊಟ್ಟು ತನ್ನ ಆಸ್ತಿ ಎಂದು ಧೃಡಪಡಿಸಬಹುದು, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಧೃಢಪಡಿಸುವುದು ಕಷ್ಟ. ಹೀಗೆ ಹೇಳಿದ ಮಾತ್ರಕ್ಕೆ ನಾನು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಮೇಲೆ ಟೀಕೆಮಾಡುತ್ತಿದ್ದೇನೆಂದು ಭಾವನೆಮಾಡಬಾರದು. ಪರಿಸ್ಥಿತಿ ಹಾಗಿದೆ. ಅದರ ಮೇಲೆ ಟೀಕೆಮಾಡುವುದಿಲ್ಲ. ಸಾಧಾರಣ ರೀತಿಯಲ್ಲಿ ಕೆಲಸಮಾಡುವಾಗ

(ಶ್ರೀ ಕೆ. ಪುಟ್ಟಸ್ವಾಮಿ)

ಯಾವ ಯಾವ ರುಜುವಾತು ಬೇಕೋ ಅದನ್ನೆಲ್ಲಾ ಕೊಡಬೇಕೆಂದು ಕೇಳುವುದು ಅಗತ್ಯ. ರೈತನ ಆಸ್ತಿಯ ಮೇಲೆ ಶೇಕಡ 50ಕ್ಕೆ ಮೀರದಂತೆ ಶೇಕಡ ಏಳು ಬಡ್ಡಿ ಹಾಕಿ ಸಾಲ ಒಂದುಕಡೆ ಕೊಡುತ್ತಿರುವಾಗ ಮತ್ತೊಂದು ಕಡೆ ಮನೆ ಮತ್ತು ದಿನೇ ದಿನೇ ಡಿಟೀರಿಯೊರೇಟ್ ಆಗುತ್ತಿರುವ ಮೆಷೀನರಿ ಮೇಲೆ ಶೇಕಡ 75 ಭಾಗವನ್ನು ಶೇಕಡ ಐದು ಬಡ್ಡಿ ಹಾಕಿ ಕೊಡುತ್ತಿದ್ದಾರೆ. ಈ ದಿವಸ ಇರುವ ಬೆಲೆ ನಾಳೆಯ ದಿವಸ ಇರುವುದಿಲ್ಲ. ಅಂಥಾದ್ದರ ಮೇಲೆ ಹೆಚ್ಚು ಕೊಡುವಾಗ ಅದೇ ನೀತಿಯನ್ನು ವ್ಯವಸಾಯಗಾರರ ವಿಷಯದಲ್ಲೂ ಏಕೆ ಅನುಸರಿಸಬಾರದು ಎಂದು ಹೇಳುವುದಕ್ಕೆ ನಾನು ಈ ದಿವಸ ಮಾತನಾಡುತ್ತಿದ್ದೇನೆ. ಕೈಗಾರಿಕೆಗಳಿಗೆ ಪ್ರೋತ್ಸಾಹಕೊಡುವಾಗ, ಸಾಲ ಕೊಡುವಾಗ ವ್ಯವಸಾಯದ ವಿಚಾರವನ್ನೂ ಪರಿಶೀಲನೆಮಾಡಿ, ಆಸ್ತಿಯ ಬೆಲೆಯನ್ನು ನಿಜವಾಗಿ ನಿರ್ಧಾರಮಾಡಿ ಅದರ ಮೇಲೂ ಏಕೆ ಸಾಕಷ್ಟು ಹಣ ಕೊಡಬಾರದು ? ಬಡ್ಡಿ ಮತ್ತು ಸಾಲಕೊಡುವ ಪಣ ವಸೂಲಾಗುವುದನ್ನು ಖಾತರಿ ಮಾಡಿಕೊಂಡು ಸಾಲ ಕೊಡುವುದಕ್ಕೇನು ಕಷ್ಟ ? ರೈತನಿಗೆ ಸಹಾಯವಮಾಡಿದರೆ ನಮ್ಮನ್ನು ಆಕ್ಷೇಪಮಾಡುವವರು ಯಾರೂ ಇಲ್ಲ.

5-30 P.M.

ಕೈಗಾರಿಕೆಯಲ್ಲಿ ತೊಡಗಿರತಕ್ಕಂಥ ವಿದ್ಯಾವಂತರ, ಬುದ್ಧಿವಂತರ ವಿಚಾರವಾಗಿ ಸ್ವಲ್ಪ ಟೀಕಮಾಡಿದರೆ ಅವರ ಹಿತಕ್ಕೆ ಧಕ್ಕೆ ತಂದರು ಎಂದು ಪ್ರಚಾರಮಾಡಿ ಗೊಂದಲ ಎಬ್ಬಿಸುತ್ತಾರೆ. ಅವರ ಬಗ್ಗೆ ಟೀಕೆಮಾಡುವುದು ಕಷ್ಟ; ಆದರೂ ಆಡಳಿತ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳದೇ ವಿಧಿಯಿಲ್ಲ. ಒಂದು ಕೇಸಿನಲ್ಲಿ ಆಸ್ತಿಯನ್ನು ಆಧಾರವಾಗಿಟ್ಟುಕೊಂಡು ಒಂದು ಕೈಗಾರಿಕೆಗೆ ಸಾಲಕೊಡಲು ಪ್ರಯತ್ನಮಾಡಿದರು. ಅದಕ್ಕಿರುವ ಮನೆಗೆ 40 ಸಾವಿರ ರೂಪಾಯಿಎಂದು ಗೊತ್ತುಮಾಡಲಾಯಿತು. ಅಷ್ಟು ಹಣ ಖರ್ಚುಮಾಡಿ ಆ ಮನೆಯನ್ನು ಕಟ್ಟಿಸಿರಬಹುದು. ಒಂದು ವೇಳೆ ಮಾರುವುದಾದರೆ ಅಂಥ ಮನೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಅಷ್ಟು ಹಣ ಕೊಟ್ಟು ಕೊಳ್ಳುವವರು ಯಾರು ? ಹಾಗಾದರೆ ಅಂಥ ಮನೆಗೆ ಆ ದಿವಸದ ಮಾರ್ಕೆಟ್ ವ್ಯಾಲ್ಯು ಏನು ? ಇದನ್ನೆಲ್ಲಾ ಯಾವ ರೀತಿ ಪರಿಶೀಲನೆಮಾಡಬೇಕು ? ನನ್ನ ಗಮನಕ್ಕೆ ಬಂದಿರುವ ಒಂದು ಸಂಶಯ ನನ್ನನ್ನು ಬಾಧಿಸುತ್ತಿದೆ. ಇಂಥ ಮನೆಯ ಜಾಗ ವಿಶಾಲವಾಗಿದೆ; ಅದರ ನಿವೇಶನಕ್ಕೆ ಬೆಲೆಯಿದೆ. ಅದರ ಆಸ್ತಿಭಾರ ಎಸ್ಟಿಮೇಟು ಮಾಡಿದ್ದಾರೆ. ಗೋಡೆ, ಕಿಟಕಿಬಾಗಿಲುಗಳ ಎಸ್ಟಿಮೇಟು ಮಾಡಿದ್ದಾರೆ. ಆದರೆ ಇಂಥ ಮನೆಗೆ ಮೇಲ್ಛಾವಣಿಯೇ ಇಲ್ಲ. ಮೇಲ್ಛಾವಣಿ ಇಲ್ಲದೇಇರತಕ್ಕಂಥ ಮನೆಗೆ 40 ಸಾವಿರ ರೂಪಾಯಿ ಬೆಲೆಮಾಡಿ 30 ಸಾವಿರ ರೂಪಾಯಿ ಸಾಲಕೊಡತಕ್ಕಂಥ ಈ ಒಂದು ವ್ಯವಸೆ ಯಲ್ಲಿ ದೋಷ ಎಲ್ಲದೆ ಎಂಬುದನ್ನು ನೋಡಬೇಕಾದುದು ಅತ್ಯಗತ್ಯ. ಎಂಜಿನಿಯರರು ಎಸ್ಟಿಮೇಟ್ ಮಾಡಿರಬಹುದು. ಷೆಡ್ಯೂಲ್‌ಪ್ರಕಾರ 40 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಬರೆದಿರಬಹುದು. ಆದುದರಿಂದ ಕೈಗಾರಿಕೆಯ ಸಾಲ ಕೊಡುವಾಗ ಇಂಥ ಪ್ರಸಂಗಗಳು ಬರುತ್ತವೆ. ಆದರೆ ವ್ಯವಸಾಯಗಾರರಿಗೆ ಸಾಲಕೊಡುವಾಗ ಸಾವಿರಕ್ಕೆ ಒಂದು ಸಹ ಇಂಥಪ್ರಸಂಗ ಬರುವುದಿಲ್ಲ. ಈ ಕೈಗಾರಿಕೆಗಳಿಗೆ ಸಾಲಕೊಡುವಾಗ ಔದಾರ್ಯದಿಂದ ಉದಾರ ಹಸ್ತದಿಂದ ಸಹಾಯ ನೀಡುತ್ತಾರೆ. ಆದರೆ ವ್ಯವಸಾಯಗಾರರಿಗೆ ಸಾಲಕೊಡುವಾಗಮಾತ್ರ ತದ್ವಿರುದ್ಧವಾಗಿರುತ್ತದೆ. ಮದ್ರಾಸ್ ಸರಕಾರದವರು ಒಂದು ಕೈಗಾರಿಕೆಗೆ ಆರೂವರೆ ಲಕ್ಷ ರೂಪಾಯಿ ಸಾಲ ಕೊಟ್ಟಿರುವ ಉದಾಹರಣೆ ಇದೆ. ಅದಕ್ಕೆ ಒಂದು ಕಾಸು ಬಡ್ಡಿ ಸಹ ದೊರೆತಿಲ್ಲ. ಆ ಕೈಗಾರಿಕೆಯು ಸಹ ನಡೆಯುತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ಸ್ತ್ರೀಧನದ ಪ್ರಾಪರ್ಟಿ ಸಹ offer ಮಾಡಿಬಿಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಮೆಷಿನರಿ ಮೇಲೆ ಸಹ ಸಾಲ ಕೊಡಲಾಗುವುದು. ಈ ರೀತಿ ಮೆಷಿನರಿ ವ್ಯಾಲ್ಯೂಮಾಡಿ ಸಾಲ ಕೊಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ಮೆಷಿನರಿ ಯಾವ ಪರಿಸ್ಥಿತಿಯಲ್ಲಿದೆ, ಎಷ್ಟು ವರ್ಷ ಕೆಲಸಮಾಡಿರಬಹುದು, ಅದರ ಇಂದಿನ ಬೆಲೆ ಎಷ್ಟು ಎಂಬುದನ್ನು ಯೋಚನೆಮಾಡಬೇಕಾಗುತ್ತದೆ. ಹಾಗೆ ಮಾಡದೆ ಸೆಕ್ಷನ್ 10ರ ಪ್ರಕಾರ ಶೇಕಡಾ 75ರಷ್ಟು ಸಾಲ ಕೊಟ್ಟುಬಿಡಬಹುದು. ಈ ರೀತಿ ಸಾಲ ಕೊಟ್ಟು ಆ ಮೇಲೆ ವಸೂಲುಮಾಡುವಾಗ ಕಷ್ಟವಾಗುತ್ತದೆ. ಎಲ್ಲ ಮೆಷಿನರಿ ಕೆಟ್ಟದ್ದಾಗಿರುತ್ತದೆ ಎಂದು ನಾನು ಹೇಳುವುದಿಲ್ಲ. ಸಾಮಾನ್ಯವಾಗಿ 100ಕ್ಕೆ 10ರಷ್ಟು ಒಳ್ಳೆಯ ಮೆಷಿನರಿ ಇರುತ್ತದೆ. ಉಳಿದ ಹತ್ತಷ್ಟುರಭಾಗದ ಮೆಷಿನರಿಯ ಮೇಲಿನ ಸಾಲವನ್ನು ವಸೂಲುಮಾಡುವಾಗ ಮಾತ್ರ ಕಷ್ಟವಾಗುತ್ತದೆ. ಅಂಥ ಉಳಿದ ಶೇಕಡ 10ರಷ್ಟು ಮೆಷಿನರಿ ಭದ್ರಾವತಿಗೆ ಕಳಿಸಲು ಯೋಗ್ಯವಾದ ಸ್ಕ್ರ್ಯಾಪ್‌ಮೆಟೀರಿಯಲ್ ಆಗುತ್ತದೆ. ಆದಕಾರಣ ಇಂಥ ಕಾನೂನು ರಚಿಸುವಾಗ ಸರ್ಕಾರ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮುನ್ನೆಚ್ಚರಿಕೆಯನ್ನು ವಹಿಸಬೇಕು. ನಾನೇನಾದರೂ ತಪ್ಪು ಹೇಳುತ್ತಿದ್ದರೆ ನನ್ನ ದೋಷಗಳನ್ನು ತಿದ್ದಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ಹೀಗೆ ಹಣ ವಸೂಲಾಗದೆ ಎಷ್ಟೋ ಸಾರಿ bad debt ಆಗುತ್ತದೆ. ಸಾಲ ಕೊಟ್ಟ ಹಣ ವಸೂಲು ಆಗುವುದಿಲ್ಲ. ಇದು ಎರಡು ಕೋಟಿ ಜನರ ಹಣ ಆಗಿರುವುದರಿಂದ ಸಾಲ ಕೊಡುವಾಗ ಹೆಚ್ಚು ಮುತವರ್ಜಿವಹಿಸಿ ಕೆಲಸ ಮಾಡಬೇಕು. ಅವರು ಎಷ್ಟೇ ಬಡ್ಡಿ ಕೊಡಲಿ, ಆದರೆ ಕೊಟ್ಟ ಸಾಲದ ಅಸಲು ಸರಕಾರಕ್ಕೆ ವಾಪಸ್ ಬರಬೇಕು. ಆದುದರಿಂದ ಸರಕಾರದವರು ಈ ವಿಚಾರದಲ್ಲಿ ಒಂದು ನಿರ್ದಿಷ್ಟ ಅಂಶವನ್ನು ಈ ಮಸೂದೆಯಲ್ಲಿ ಕೊಡಬೇಕು. ಈ ಬಗ್ಗೆ ಇರತಕ್ಕ ನೀತಿನಿಯಮಗಳನ್ನು ಪರಿಶೀಲನೆ ಮಾಡಬೇಕು. ಇದನ್ನು ಪರಿಶೀಲನೆ ಮಾಡುವುದಕ್ಕೆ ಅಂಕಿಅಂಶಗಳನ್ನು ಕೊಡದೇ ಇದ್ದರೆ ಕಷ್ಟವಾಗುತ್ತದೆ. ಆದಕಾರಣ ಪರಿಶೀಲನೆಮಾಡುವುದಕ್ಕಾಗಿ ಅಂಕಿಅಂಶಗಳನ್ನು ಸರಕಾರದವರು ಒದಗಿಸುತ್ತಾರೆಂದು ನಾನು ನಂಬಿದ್ದೇನೆ.

MR. DEPUTY SPEAKER.—There are still many more members to speak.

(*Sri K. Puttaswamy was about to sit down*).

MR. DEPUTY SPEAKER.—Sri B. Rachiah.

SRI T. MARIAPPA.—He is winding up.

MR. DEPUTY SPEAKER.—Is the Hon'ble member winding up ?

Sri K. PUTTASWAMY.—I think no useful purpose will be served by winding up.

Mr. DEPUTY SPEAKER.—Sri B. Rachiah.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಕೈಗಾರಿಕೆಗಳಿಗೆ ಸಂಬಂಧಪಟ್ಟಂಥ ಈ ಮಸೂದೆಯನ್ನು ಸ್ವಾಗತಿಸುತ್ತಾ ನನಗೆ ತಿಳಿದಮಟ್ಟಿಗೆ ನನ್ನ ಒಂದೆರಡು ಅಭಿಪ್ರಾಯಗಳನ್ನು ಮಾನ್ಯ ಸಭೆಯ ಮುಂದೆ ನಿವೇದಿಸಿಕೊಳ್ಳಲು ಇಚ್ಛಿಸುತ್ತೇನೆ. ಈಗ ಹೊಸ ರಾಜ್ಯದಲ್ಲಿ ಬಂದಿರತಕ್ಕ ಐದು ಭಾಗಗಳಿಗೆ ಅನ್ವಯಿಸುವ ಹಾಗೆ ಒಂದೇ ರೀತಿಯ ಕಾನೂನು ಮಾಡುವುದಕ್ಕಾಗಿ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಕೈಗಾರಿಕೆಗಳಿಗೆ ಕೊಡುವ ಸಾಲಗಳಿಗೆ ಸಂಬಂಧಪಟ್ಟ ವಿವಿಧ ಕಾನೂನುಗಳನ್ನು ಸಮನ್ವಯಗೊಳಿಸಿ ಒಂದೇ ರೀತಿಯ ಕಾನೂನನ್ನು ಮಾಡುವ ಉದ್ದೇಶದಿಂದ ಈ ಮಸೂದೆಯನ್ನು ತಂದಿರುವುದರಿಂದ ಇದು ಸ್ವಾಗತಾರ್ಹವಾಗಿದೆ. ಈಗಾಗಲೇ ಮಾತನಾಡಿದ ಅನೇಕ ಮಾನ್ಯ ಸದಸ್ಯರು ತಮಗೆ ತೋರಿದ ಕೆಲವು ಅಂಶಗಳನ್ನು ತಿಳಿಸಿದ್ದಾರೆ. ಮೊಟ್ಟಮೊದಲನೆಯದಾಗಿ ಕೈಗಾರಿಕೆಯ ಬೋರ್ಡುಗಳಲ್ಲಿ ಯಾರು ಯಾರು ಸದಸ್ಯರು ಇರಬೇಕು ಎಂಬುದಕ್ಕೆ ನನ್ನ ಮಿತ್ರರಾದ ಸದಸ್ಯರೊಬ್ಬರು ಕೆಲವಾರು ಅಂಶಗಳನ್ನು ಈಗಾಗಲೇ ಹೇಳಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದುದು ಹಿಂದುಳಿದ ಪಂಗಡಗಳ ಪ್ರತಿನಿಧಿಗಳು ಅದರಲ್ಲಿ ಇರಬೇಕಾದದ್ದು. ಇಂಥ ಬೋರ್ಡುಗಳನ್ನು ಅಥವಾ ಕಮಿಟಿಗಳನ್ನು ಸರಕಾರದವರು ರಚಿಸುವಾಗ ಹಿಂದುಳಿದ ಪಂಗಡದ ನಿಮ್ನ ವರ್ಗದ ಪ್ರತಿನಿಧಿಗಳೊಬ್ಬರು ಇರಬೇಕೆಂಬುದು ಮಸೂದೆಯಲ್ಲಿ ಅಡಕವಾಗಿರಬೇಕೆಂದು ನಾನು ಹೇಳುತ್ತೇನೆ. ಈಗಾಗಲೇ ರಚಿತವಾದ ಇಲೆಕ್ಟ್ರಿಸಿಟಿ ಬೋರ್ಡಿನಲ್ಲಿ ನಿಮ್ನವರ್ಗದ ಪ್ರತಿನಿಧಿಯೊಬ್ಬರು ಇರಬೇಕೆಂದು ಕಾನೂನಿನಲ್ಲಿ ನಮೂದು ಇಲ್ಲದೇ ಇರುವುದರಿಂದ ನಿಮ್ನ ವರ್ಗಕ್ಕೆ ಸಬಂಧಪಟ್ಟ ಒಬ್ಬ ಪ್ರತಿನಿಧಿಯನ್ನು ಕೊಡಲು ಸಾಧ್ಯವಾಗಲಿಲ್ಲ ಎಂದು ಸರಕಾರಕ್ಕೆ ನಾನು ಹೇಳುತ್ತೇನೆ. ಬಹುಶಃ ಅಂಥ ಸಮಿತಿಗಳಲ್ಲಿ ನಿಮ್ನವರ್ಗದ ಪ್ರತಿನಿಧಿಯೊಬ್ಬರು ಇರುವುದಾದರೆ ನಿಮ್ನತರಗತಿಯವರ ಹಕ್ಕು ಭಾದ್ಯತೆಗಳನ್ನು ಕಾಪಾಡುವುದಕ್ಕೋಸ್ಕರ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ. ಇಷ್ಟೇ ಅಲ್ಲ, ಇದರಿಂದ ಕೆಲಸಕಾರ್ಯಗಳು ಸುಗಮವಾಗಿ ನಡೆಯುತ್ತವೆ ಎಂದೂ ಹೇಳುತ್ತೇನೆ. ಹಾಗೆಯೇ ಅನೇಕರ ಭಾವನೆಯೂ ಆಗಿದೆ ಎಂದು ಹೇಳಬಹುದು. ಆದುದರಿಂದ ಇಂಥ ಸಮಿತಿಗಳಲ್ಲಿ ನಿಮ್ನ ಪ್ರತಿನಿಧಿಯೊಬ್ಬರನ್ನು ಹಾಕಬೇಕು. ಮೈಸೂರ್ ಸಂಸ್ಥಾನದಲ್ಲಿ ಇರತಕ್ಕ ಪ್ರತಿಯೊಂದು ಸ್ಟಾಚ್ಯುಟರಿ ಕಮಿಟಿಯಲ್ಲಿ ನಿಜವಾಗಿಯೂ ಸುಮಾರು ಐದನೆಯ ಒಂದು ಭಾಗದಷ್ಟು ನಿಮ್ನವರ್ಗದ ಪ್ರತಿನಿಧಿಗಳು ಇರಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಈ ಸಭೆಯ ಮುಂದೆ ಹೇಳುತ್ತೇನೆ.

ಸರ್ಕಾರದವರು ಆ ರೀತಿ ನಿಮ್ನವರ್ಗದವರ ಪ್ರತಿನಿಧಿ ಇರಬೇಕೆಂದು ಹೇಳುವುದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಶ್ರೀ ಮಲ್ಲಾರಾಧ್ಯರವರು ಮಾತನಾಡುವಾಗ ಹಿಂದೆ ಮೈಸೂರು ಸಂಸ್ಥಾನದಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ಅದು ವಸೂಲಾಗದೆ ಇದ್ದಂಥ ನಿದರ್ಶನಗಳನ್ನು ಕೊಟ್ಟರು. ಹಾಗೆ ಕೊಡುವಾಗ ಶ್ರೀ ವಿಶ್ವೇಶ್ವರಯ್ಯನವರು ಹಾಕಿರತಕ್ಕ ಒಂದು ಯೋಜನೆಯ ಪ್ರಕಾರ ಗ್ರಾಮಾಂತರ ಕೈಗಾರಿಕೆಗಳಿಗೆ ಹೆಚ್ಚಾಗಿ ಪ್ರೋತ್ಸಾಹ ಕೊಡಲು ಪರ್ಸನಲ್ ಸೆಕ್ಯೂರಿಟಿಯ ಮೇಲೆ ಬಹಳ ಹೆಚ್ಚಿನ ದುಡ್ಡನ್ನು ಕೊಟ್ಟಿದಾರೆ, ಅದು ಬಹುಭಾಗದ ದುಡ್ಡಾಗಿರುವುದರಿಂದ ವಾಪಸು ಬರದೇ ಇರತಕ್ಕ ನಿದರ್ಶನ ಬಹಳವಾಗಿದೆ ಎಂದು ಹೇಳುತ್ತಾ ಇದ್ದರು. ಅವರು ಹಿಂದೆ ಈ ಕೈಗಾರಿಕಾ ಇಲಾಖೆಯ ಅಧಿಕಾರಿಗಳಾಗಿದ್ದಾಗ ಕೆಲವು ಮಿಲ್ಲುಗಳಿಗೆ, ದೊಡ್ಡ ದೊಡ್ಡ ಕಂಪನಿಗಳಿಗೆ ಅದೂ ಅಲ್ಲದೆ ಕೆಲವು ಪ್ರೈವೇಟ್ ಪ್ರಿಂಟರ್ಸ್ ಅಸೋಸಿಯೇಷನ್‌ಗಳಂಥಾ ಸಂಸ್ಥೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಆಗ ಕೊಟ್ಟು ಅದು ವಸೂಲಾಗದೇ ಅದಕ್ಕೆ ವಿನಾಯಿತಿ ಕೊಟ್ಟಿರುವುದನ್ನು ನೋಡಿದ್ದೇನೆ. ಇವೊತ್ತಿನ ದಿವಸ ಸಣ್ಣ ಪುಟ್ಟ ಕೈಗಾರಿಕೆಗಳಲ್ಲಿ ಹೆಚ್ಚು ಭಾಗವಹಿಸತಕ್ಕ ಜನ ಅದರಲ್ಲೂ ಕೂಡ ತಮ್ಮ ಒಂದು ನಿತ್ಯ ಜೀವನವಲ್ಲಿ ತೊಡಗಿರತಕ್ಕ ಜನಗಳಿಗೆ ಅಲ್ಪ ಸ್ವಲ್ಪ 300 ರೂಪಾಯಿಗಿಂತ ಕಡಮೆ. ಸಾಲವನ್ನು ಪರ್ಸನಲ್ ಸೆಕ್ಯೂರಿಟಿಯ ಮೇಲೆ ಕೊಟ್ಟಿರುವುದರಲ್ಲಿ ಬಹುಭಾಗ ಈಗಾಗಲೇ ವಾಪಸು ಬಂದಿದೆ. ಸಣ್ಣ ಮಟ್ಟದಲ್ಲಿರತಕ್ಕ ಜನ ದುರ್ವಿನಿಯೋಗ ಮಾಡಿಕೊಂಡಿಲ್ಲ ಎನ್ನತಕ್ಕ ನಿದರ್ಶನ ನಮ್ಮ ಗಮನಕ್ಕೆ ಬಂದಿದೆ. ಅದನ್ನು ಈ ಸಭೆಯ ಮುಂದೆ ಹೇಳುತ್ತಾ ಇದ್ದೇನೆ. ಹೆಚ್ಚಾಗಿ ದುರ್ವಿನಿಯೋಗ ಮಾಡಿರತಕ್ಕ ಜನ ಕಷ್ಟದಿಂದ ಜೀವನ ನಡೆಸತಕ್ಕ ಜನ. ಇವರು ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು ಮೋಸ ಮಾಡಿದ್ದಾರೆಯೇ ವಿನಾ ಸಣ್ಣ ಪುಟ್ಟ ಜನ, ಧರ್ಮ ನೀತಿಗೆ ಬೆಲೆಬಾಗತಕ್ಕ ಜನ ಆ ರೀತಿ ಮಾಡಿಲ್ಲ ಎಂದು ಈ ಸಭೆಯ ಮುಂದೆ ಹೇಳುತ್ತಾ ಇದ್ದೇನೆ. ಸಣ್ಣ ಪುಟ್ಟ ಕೈಗಾರಿಕೆಗಳಿಗೆ, ಸ್ವಂತ ಕೈಗಾರಿಕೆ ಮಾಡಲು ಅವಲಂಬಿಸಿರತಕ್ಕ ಜನಗಳಿಗೆ ಪರ್ಸನಲ್ ಸೆಕ್ಯೂರಿಟಿಯ ಮೇಲೆ ಸಾಲ ಕೊಡುವುದರಿಂದ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂದು ಏನು ಹೇಳುತ್ತಾ ಇದ್ದೇವೆ ಅದನ್ನು ಸಾಧಿಸಬಹುದಷ್ಟೇ ಅಲ್ಲ. ದೊಡ್ಡ ಸಿಟಿಗಳಲ್ಲಿ ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡಿದ್ದನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ತಾವು ಯಾವುದನ್ನು ಮನಸ್ಸಿನಲ್ಲಿಟ್ಟು ಕೊಂಡಿದ್ದೀರೋ ಅದು ಸೆಕ್ಷನ್ (6)ರಲ್ಲಿ ಇದೆ.

ಶ್ರೀ ಬಿ. ರಾಚಯ್ಯ.—ಯಾವ ಇಂಡಸ್ಟ್ರೀ ಅನ್ನುವುದನ್ನು ತಾವು ಡಿಫೈನ್ ಮಾಡಿಲ್ಲ. ಖಾದಿ ಮತ್ತು ಗ್ರಾಮ ಕೈಗಾರಿಕೆಗಳಲ್ಲಿ 15 ಕೈಗಾರಿಕೆಗಳನ್ನು ಹಾಕಿದ್ದೀರಿ. ಅದಲ್ಲದೆ ಬೇರೆ ಯಾವುದು ಇದೆಯೋ ಅದನ್ನು ಹೇಳುತ್ತಾ ಇದ್ದೇನೆ. ಸೆಕ್ಷನ್ಸ್ 10, 11, 12, 13 ರಲ್ಲಿ ಸರ್ಕಾರದವರು ತಮಗೆ ಕಂಡುಬಂದಾಗ ಎಕ್ಸಮ್ಟ್ ಮಾಡಿ ಸಾಲ ಕೊಡಬಹುದ . ಅದೂ ಕೂಡ 5,000 ರೂಪಾಯಿಗಳಿಗೆ ಹೆಚ್ಚಿಲ್ಲದಂತೆ ಕೊಡಬಹುದು ಎಂದು ಹೇಳಿರುವುದು ನ್ಯಾಯವಾಗಿದೆ. ಒಂದೊಂದು ಸಂದರ್ಭದಲ್ಲಿ ಒಬ್ಬರು ಯಾರಾದರೂ ಸ್ವಂತವಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಮಧ್ಯೇ ನಡೆಸುವುದಕ್ಕೆ ಮಾರ್ಗ ಇಲ್ಲದ ಸಂದರ್ಭದಲ್ಲಿ ಈ ತರಹದ ನೆರವು ಕೊಡುವುದಕ್ಕೆ ಅವಕಾಶವಿಟ್ಟುಕೊಂಡಿರುವುದು ಒಳ್ಳೆಯದಾಗಿದೆ ಎಂದು ನನ್ನ ಭಾವನೆ. ಅದೂ ಅಲ್ಲದೆ ಸೆಕ್ಷನ್ 20 ( )ರಲ್ಲಿ ಹೇಳಿದ ಹಾಗೆ ಪರ್ಸನಲ್ ಸೆಕ್ಯುರಿಟಿಯ ಮೇಲೆ ತಾವು ಸಾಲ ಕೊಟ್ಟಾಗ ಆ ಸಾಲವನ್ನು ಷ್ಯೂರಿಟಿಯಿಂದ ವಸೂಲು ಮಾಡಿಕೊಂಡಾಗ ಅವನಿಗೆ ಮತ್ತೆ ಸಾಲಕೊಟ್ಟವನಿಂದ ವಸೂಲು ಮಾಡಿಕೊಡುವುದಕ್ಕೆ ಅವಕಾಶ ಇಟ್ಟಿರುವುದು ನ್ಯಾಯವಾಗಿದೆ. ಇದು ಅನುಭವದಿಂದ ಹಾಕಿರತಕ್ಕ

(ಶ್ರೀ ಬಿ. ರಾಚಯ್ಯ)

ಕ್ಲಾಸ್ ಆಗಿದೆ. ಹಿಂದೆ ಈ ರೀತಿ ಇಲ್ಲದೇ ಇದ್ದುದರಿಂದ ಯಾರೂ ಷ್ಯೂರಿಟಿ ಇಲ್ಲದೇ ಇದ್ದ ಸಂದರ್ಭಗಳು ಅನೇಕವು ಇವೆ. ಯಾವ ಖಾತ್ರಿಯ ಮೇಲೆ ಜವಾಬ್ದಾರಿ ತೆಗೆದುಕೊಳ್ಳೋಣ ಎಂಬ ಅಭಿಪ್ರಾಯ ಜನಗಳಲ್ಲಿದ್ದುದರಿಂದ ಈ ರೀತಿ ಮಾಡಿರುವುದು ಷ್ಯೂರಿಟಿಯಾಗಿ ನಿಂತುಕೊಳ್ಳುವವರಿಗೂ ಅನುಕೂಲವಾಗುತ್ತದೆ. ಮತ್ತೆ ಈ ರೀತಿ ಏನಾದರೂ ಯಾವ ಉದ್ದೇಶಕ್ಕೆ ಸಾಲ ತೆಗೆದುಕೊಂಡಿರುತ್ತಾರೋ ಅದಕ್ಕೆ ಉಪಯೋಗಿಸಿಕೊಳ್ಳದೆ ಇರತಕ್ಕವರಿಂದ ಆ ಹಣವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ಇದರಲ್ಲಿ ನಿಯಮ ಅಡಕಮಾಡಿದ್ದೀರಿ. ಈ ದೃಷ್ಟಿಯಿಂದ ಈ ಮಸೂದೆಯಿಂದ ಹೆಚ್ಚಿನ ಸೌಲಭ್ಯದೊರಕಿ ಇದರ ಉದ್ದೇಶ ನೆರವೇರಿ ಜನಗಳಿಗೆ ಅನುಕೂಲವಾಗುತ್ತದೆ ಎಂದು ನಂಬಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ ಮತ್ತು ಈ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

*ಶ್ರೀ ವಿ. ಶ್ರೀನಿವಾಸಶೆಟ್ಟಿ (ಕುಂದಾಪುರ).—ಸ್ವಾಮಿ, ಈ ಬಿಲ್ಲಿನ ವಿಷಯವಾಗಿ ಹೆಚ್ಚು ಮಾತನಾಡಲು ಬಯಸುವುದಿಲ್ಲ. ಆದರೆ ಇಂಥ ಕಾಯಿದೆಗಳ ಜಾರಿಯಲ್ಲಿ, ಬೇರೆಬೇರೆ ರಾಜ್ಯಗಳ ಅನುಭವ ನೋಡಿದಲ್ಲಿ ಇದರ ಉದ್ದೇಶ ಯಾವಾಗಲೂ, ಸರಿಯಾಗಿ ನೆರವೇರುತ್ತದೆಯೋ ಇಲ್ಲವೋ ಎಂದು ಯೋಚನೆ ಮಾಡಬೇಕಾಗುತ್ತದೆ. Mysore State Aid to Industries Bill ಎಂದು ಇದ್ದುದನ್ನು Mysore State Aid to Ruling Party Bill ಎಂದು ತಿಳಿದುಕೊಂಡರೂ ಸಹ ಸರಿಯಾದೀತು...............

Sri T. MARIAPPA.—I object to this insinuation, Sir.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಇದು ತಮಗಲ್ಲಾ, ರೂಲಿಂಗ್ ಪಾರ್ಟಿಗೆ ಎಂದು ಹೇಳಿದೆ. ಇದನ್ನು ಈಗಿರುವ ಸ್ಥಿತಿಯಲ್ಲಿ ನೋಡಿದರೆ, ಅಧಿಕಾರದಲ್ಲಿ ಯಾರು ಇರುತ್ತಾರೆಯೋ ಅವರ ಸ್ವಂತಪ್ರಯೋಜನಕ್ಕಾಗಿ ಇದೆ ಏನೋ ಎಂದು ತೋರುತ್ತದೆ. ಇಂಥ ಕಾಯಿದೆ ಬೇಕು ಎನ್ನುವ ವಿಷಯದಲ್ಲಿ ಅನುಮಾನವಿಲ್ಲ. ಆದರೆ ನಾವು ಇದರ ಹಿಂದಿನ ಚರಿತ್ರೆಯನ್ನು ಕೇಳುವಾಗ ಅನೇಕ ಜನ ಅಸೆಂಬ್ಲಿಯ ಮೆಂಬರುಗಳೂ ಕೂಡ, ದೊಡ್ಡ ದೊಡ್ಡ ಜನರು ಯಾವತರಹ ಕೈಗಾರಿಕೆಗಾಗಿ ಸಾಲಗಳನ್ನು ತೆಗೆದುಕೊಂಡು ಬೇರೆ ಬೇರೆ ಉದ್ದೇಶಕ್ಕೆ ಉಪಯೋಗಿಸಿದರೂ ಹಾಗೆ—ಬೇರೆಬೇರೆ ಉದ್ದೇಶಕ್ಕೆ ಉಪಯೋಗಿಸಿದ ನಿದರ್ಶನ ಕಂಡುಬಂದಿದೆ. ಮತ್ತೆ ಆ ಸಾಲವನ್ನು ಹಿಂದಕ್ಕೆ ಕೊಡದ ನಿದರ್ಶನಗಳೂ ಅನೇಕವಿವೆ ಎಂದು ಕೇಳುತ್ತೇವೆ. ಇದೇ ರೀತಿ ಮದ್ರಾಸ್ ಸ್ಟೇಟ್‌ನ ವಿಚಾರವನ್ನು ಹೇಳುವುದಾದರೆ ಅಲ್ಲೂಕೂಡ ಮಂತ್ರಿಗಳಮೇಲೆ ದೊಡ್ಡ ಆಪಾದನೆ ಇತ್ತು. 12ಲಕ್ಷ ರೂಪಾಯಿ ತನ್ನ ಮಾವನ ಬಗ್ಗೆ ಸ್ಟೇಟ್ ಏಡ್ ಕೊಟ್ಟ ಆಪಾದನೆ ಇತ್ತು. ಸೆಕ್ಷನ್ (ಳ)ರಲ್ಲಿ Board of Industries ರಚನೆಯ ವಿಚಾರವಿದೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಕೈಗಾರಿಕೆಯನ್ನು ಒಂದು ಮೇಲ್ ಮಟ್ಟಕ್ಕೆ ತರಬೇಕೆಂಬ ಅಪೇಕ್ಷೆ ಇದ್ದಲ್ಲಿ ಈ ರೀತಿ ರಾಜಕೀಯ ಪಕ್ಷ ಪಂಗಡಗಳನ್ನು, ಅಸೆಂಬ್ಲಿಯ ಮೆಂಬರುಗಳನ್ನು ಇದರಲ್ಲಿ ಸೇರಿಸಿಕೊಳ್ಳಬೇಡಿ. ಕೈಗಾರಿಕೆಗಳಲ್ಲಿ ಮುಂದುವರಿದ ಜನರನ್ನು ಮಾತ್ರ ಸೇರಿಸಿಕೊಳ್ಳಿ ಎಂದು ಹೇಳುತ್ತೇನೆ. ಏಕೆಂದರೆ ಕಾಂಗ್ರೆಸ್ ಪಾರ್ಟಿ ಆಗಲಿ, ಪಿ.ಎಸ್.ಪಿ. ಆಗಲಿ, ಕಮ್ಯೂನಿಸ್ಟ್ ಪಾರ್ಟಿಯಾಗಲಿ (ಕೇರಳದಲ್ಲಿ ಕಮ್ಯೂನಿಸ್ಟ್ ಪಾರ್ಟಿಯವರು ಇದ್ದಾರೆ) ಈ ರೀತಿ ಕಮ್ಯೂನಿಸ್ಟ್ ಪಾರ್ಟಿಯವರಾಗಲೀ, ಒಂದು ಪಾರ್ಟಿಯವರಿಗೆ ಅನುಕೂಲಮಾಡಿಕೊಡುತ್ತಿದ್ದಾರೆ ಎನ್ನುವ ಆಪಾದನೆಗೆ ಅವಕಾಶ ಕೊಡಬೇಡಿ. ಈ Board of Industry ಏನಿದೆ ಇದರಲ್ಲಿ 11 ಜನ ಮೆಂಬರುಗಳು ಇರುತ್ತಾರೆ. ಮೂರು ಜನ ಅಸೆಂಬ್ಲಿಯ ಮೆಂಬರುಗಳು, ಒಬ್ಬರು ಕೌನ್ಸಿಲ್ ಮೆಂಬರು. ಬಾಕಿಯವರು ಕೆಲವರು ಸರ್ಕಾರದವರಿಂದ ನಾಮಿನೇಟ್ ಆದವರು ಇರುತ್ತಾರೆ. ಆದ್ದರಿಂದ ಇಂತಹದಕ್ಕೆ ಅವಕಾಶ ಕೊಡಬೇಡಿ. ರಾಜಕೀಯ ಪಕ್ಷ, ಪಂಗಡಗಳ ಕೈವಾಡ ನಡೆಯುವುದಕ್ಕೆ ಅವಕಾಶ ಕೊಡಬೇಡಿ. ಇದು ಬರಿಯ ಒಂದು ಕೈಗಾರಿಕೆಯ ಅಥವಾ ಉದ್ಯಮದ ದೃಷ್ಟಿಯಿಂದ ಹೇಳಿದ ವಿಚಾರವಲ್ಲ. ನಿಮಗೆಯೇ ಯಾವಾಗಲೂ ಅಧಿಕಾರ ಬರುತ್ತದೆ ಎಂದು ತಿಳಿದುಕೊಳ್ಳಬೇಡಿ.

ನನ್ನ ಮಿತ್ರರಾದ ಶ್ರೀ ಪುಟ್ಟಸ್ವಾಮಿಯವರು ಹೇಳಿದ ಹಾಗೆ, ನಮ್ಮ ಕಾರ್ಯಕ್ರಮ ಹಾಗಿದೆ ಎಂದು ಹೇಳಿದರು. ಅದಕ್ಕೆ ಶ್ರೀ ಮರಿಯಪ್ಪನವರೂ ಸಹ ಒಪ್ಪಿ ಈಗಾಗಲೇ ಅನೇಕ ಜನರಿಗೆ ಸಾಲವನ್ನು ಕೊಟ್ಟು ಹಾಳಾಗಿ ಹೋಗಿದೆ ಎಂದೂ ಹೇಳಿದರು.

ಶ್ರೀ ಟಿ. ಮರಿಯಪ್ಪ.—ಹಾಗೆ ಹೇಳಲಿಲ್ಲ. ವಸೂಲಾಗಿಲ್ಲ ಎಂದು ಹೇಳಿದೆ, ಅಷ್ಟೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಇಂತಹ ನಿದರ್ಶನಗಳು ಬಂದರೂ ಬರಬಹುದು. ಆದರೂ ಸಹ ಈ ವಿಷಯದಲ್ಲಿ ಸರಕಾರದವರು ಯೋಚನೆ ಮಾಡಬೇಕು. ನಾನು ಈ ಬಿಲ್ಲಿನ ಪ್ರಾಮುಖ್ಯವಾದ ಉದ್ದೇಶವನ್ನು ಅಲ್ಲಗಳೆಯುತ್ತಿಲ್ಲ. ಪಕ್ಷ ಪಂಗಡಗಳಿಗೆ ಈ ಬೋರ್ಡಿನಲ್ಲಿ ಅವಕಾಶ ಕೊಡಕೂಡದು ಮತ್ತು ಕ್ಲಾಸು (4) ರಲ್ಲಿರುವಂತೆ ಯಾವ ಎಂ.ಎಲ್.ಎ. ಅಥವಾ ಎಂ.ಎಲ್.ಸಿ.ಗಳೂ ಕೂಡ ಈ ಬೋರ್ಡಿನಲ್ಲಿರಲು ಅವಕಾಶ ಕೊಡಕೂಡದೆಂದು ನಾನು ಕೇಳಿಕೊಳ್ಳುತ್ತೇನೆ.

Mr. F. X. DENIS PINTO (Kaup).—Sir, I rise to support the Bill before the House and I wish to make a few observations.

In item (*f*) of clause 6, it is said that aid may be given to old or established industries. I would rather like that this may be deleted, because after all our intention today is to help and encourage small scale industries so that employement potential may increase and also to encourage the growth of industries in backward areas.

It is also provided in the proviso that the aid shall not be given to any old or estabished industry unless the Government is satisfied that special reasons exist for giving such aid. I find that our aim should be or ought to be to encourage small scale industries. So I submit that this sentence may be deleted.

In clause 8, Government has kept power to delegate their power to grant aid to the Board of Industries or such other authority as may be prescribed. Here also, I fear that Government should not delegate this power to any authority other than the Board, particularly the power to scrutinise the oan applications and grant loans. I donot see there is any necessity for the Government to delegate these powers, because there is a chance for the misuse of the power, if the same is delegated to any other authority. If the Government's intention is to delegate power to the Board of Industries, there is no reason why they should say 'any other authority as may be prescribed'.

Clause 9(4) says that no aid shall be granted under this Act if the Board of Industries by an unanimous resolution at a meeting advises the rejection of the application.

Sri J. B. MALLARADHYA.—If my friend yields for a minute, I would like to ask him: is it open for the said Board of Industries to have power of sanction of the loan?

Sri F. X. DENIS PINTO.—Government can delegate these powers to the Board of Industries. My point is that once the Board is formed, there is no necessity to delegate the power to any other authority. That is my submission.

It is said in clause (4) that if the application is rejected by a unanimous resolution, the Government should not grant the loan. I would like to say that even if it is not unanimous, even if it is rejected by a majority, the Government should not grant the loan; because we put in men of experience and if those men disagree and reject the application, the Government should not grant the loan.

Sri T. MARIAPPA.—Are there instances where the Government have issued any loans even in case where the Board have rejected the applications?

Sri J. B. MALLARADHYA.—This clause is very clear. This Board of industries is expected to make recommendations and Government should take decision and nothing prevents the Government to take a decision contrary to the recommendations of the Board of Industries. That is what you are against?

Sri T. MARIAPPA.—What I am asking is, are there any instances where the Government have granted aid against the majority wish?

Sri F. X. DENIS PINTO.—I do not say that. Clause 10 refers to Grant of loans. It says:

> "No loan shall be granted of an amount exceeding seventy-five per cent of the net value of the assets of the industrial business or enterprise and of anyto her property offered as collateral security for the loan, after deducting in both cases existing encumbrances, such value to be ascertained by such persons as *may* be appointed by the Government and in accordance with such rules as may be prescribed; for the purpose of this valuation, the additional asssets which *may* be created by the expenditure of the sums granted may be taken into account to such extent as may be prescribed."

That word 'may' has a very ambiguous meaning. I understand if the amount applied for is below say Rs. 5,000, you can at least say that the amouut may be spent on additional machinery. For loans above Rs. 25,000, I would suggest that assests *should be* created' and that phrase 'May be created is not desirable, because the security will be very much lessened, and if subsequently, the machinery is removed from the place, there will be difficulty for the Government to recover the loans. So, I would suggest that a distinction may be made and in respect of loans less than Rs. 5,000 you may say fresh machinery may be bought. But in other cases, you should say that assets should be there. I would like that assets are created and should be taken into account.

Clause 11 says: "Every loan granted under this Act shall be secured by a mortgage or floating charge upon the whole of the assets of the business or enterprise, subject to any encumbrances existing at the time of the grant ......"

(SRI F. X. DENIS PINTO)

I do not think any banker would give any loan on any property which has got encumbrances. If Government want to encourage industries, let them see that encumbrances are at least cleared by the loan taken and let the Government have the first claim and first charge on that property.

[MR. SPEAKER in the Chair]

Clause 14 (2) says:

"The period fixed as aforesaid shall not exceed ten years unless the Government shall, by general or special order, extend the same."

Here also, I would like that the Government should not extend the period. I wish that loans should be repaid within ten years. In business circles, whenever they give loan, the period is fixed and the borrower should know that the liability has to be cleared within that period—five, ten or fifteen years. It should not be extended. If there is any slightest chance to extend the period, the borrower always feels that after all, the period may be extended and he can also evade payment.

As regards Clause 25—I would only like to suggest here that in valuing assets, the Government may appoint experienced men, an engineer or one who knows the values of property and who can value assets properly. I am told that there are some misuses in this respect here and there. Recently a loan application from Shimoga came to my notice where this valuation does not seem to have been done properly. They have valued 2 acres of land at Rs. 78,000 and it has been accepted. It passes my comprehension whether 2 acres of land in Shimoga at any time could be valued at Rs. 78,000. I would only say that Government should appoint competent people to value the land and then the loan application should be passed by the Government or the Board of Industries.

With these few observations, I support the Bill.

ಶ್ರೀ ಬಿ. ಡಿ. ಜತ್ತಿ.—ಅಧ್ಯಕ್ಷರೇ, ಇದುವರೆಗೆ ಕೆಲವು ಮಾನ್ಯ ಸದಸ್ಯರು. ತಮ್ಮ ಸಲಹೆಗಳನ್ನು ಈ ಮಸೂದೆಯ ಮೇಲೆ ಮಾಡಿದ್ದಾರೆ. ಕೆಲವು ಸಲಹೆಗಳು ಬಹಳ ಉಪಯೋಗಕರವಾದುವುಗಳಾಗಿವೆ. ಮಾನ್ಯ ಸದಸ್ಯರಾದಂಥ ಶ್ರೀ ಗದಗ್‌ರವರು ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಸಾಲಕ್ಕಾಗಿ ಅರ್ಜಿ ಕೊಟ್ಟ ಜನರಿಗೆ ಅವರ ಅರ್ಜಿಗಳು ಜಾಗ್ರತೆ ಇತ್ಯರ್ಥವಾಗಿವೆ. ಅನೇಕ ದಿವಸಗಳು ತಡವಾಗಿ ಅದರಿಂದ ಬರತಕ್ಕ ಲಾಭ ಬರುವುದಿಲ್ಲ. ಆಗಬೇಕಾದಂಥ ಒಂದು ಕೈಗಾರಿಕೆ ಅಥವಾ ಉದ್ಯೋಗಕ್ಕೆ ಅದರಿಂದ ಯಾವ ಪ್ರಯೋಜನವಾಗುವುದಿಲ್ಲ, ಆದ್ದರಿಂದ ಈ ವಿಷಯವನ್ನು ವಿಚಾರಮಾಡಿ ಈಗಿರತಕ್ಕ ಪ್ರೊಸೀಜರನ್ನು ಸರಿಪಡಿಸಿ ಅರ್ಜಿಗಳು ಬಂದನಂತರ ತಾತ್ಕಾಲಿಕವಾಗಿ ನಿರ್ಣಯ ಮಾಡುವ ರೀತಿಯನ್ನು ಗೊತ್ತುಮಾಡಬೇಕೆಂದು ಸಲಹೆಮಾಡಿದರು. ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವರ ಸಲಹೆಯನ್ನು ಪರ್ಯಾಲೋಚಿಸಲಾಗುವುದು.

ಇನ್ನು ಶ್ರೀ ಜೆ. ಬಿ. ಮಲ್ಲಾರಾಧ್ಯರು ಒಂದೊಂದು ಕೈಗಾರಿಕೆಗೆ ನಿರ್ದಿಷ್ಟವಾಗಿ ಇಷ್ಟಿಷ್ಟು ಹಣವನ್ನು ಸರ್ಕಾರದಿಂದ ಒದಗಿಸಲಾಗಿದೆ, ಆ ರೀತಿ ಸರ್ಕಾರ ಕೊಡುತ್ತದೆ ಎಂಬ ಅಂಶವನ್ನು ಸ್ಪಷ್ಟವಾಗಿ ಈ ಮಸೂದೆಯಲ್ಲಿ ಹೇಳಲಿಲ್ಲವೆಂದು ಹೇಳಿದರು. ಅದರಂತೆಯೇ ಒಂದು ದೊಡ್ಡ ಉದ್ಯೋಗ ಪ್ರಾರಂಭಮಾಡಿ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದಂತೆ ಒಂದೇ ಇಂಡಸ್ಟ್ರೀಗೆ ಹಣಕೊಡುವುದು ಸರಿಯಾಗಿಲ್ಲ. ಈ ಮಸೂದೆಯನ್ನು ತಂದಿರುವ ಮುಖ್ಯ ಉದ್ದೇಶ ಒಂದೇ ಇಂಡಸ್ಟ್ರಿಗೆ ಹೆಚ್ಚು ಹಣ ಕೊಡುವುದನ್ನು ತಪ್ಪಿಸಿ ಸಣ್ಣ ಪುಟ್ಟ ಕೈಗಾರಿಕೆಗಳು ಹೆಚ್ಚಾಗಿ ಬೆಳೆಯಬೇಕೆಂಬುದು. ಅದರಲ್ಲೂ ಕೂಡ ಯಾವ ಭಾಗದಲ್ಲಿ ಯಾವ ತರಹ ಉದ್ಯೋಗ ಆಗಿಲ್ಲವೋ ಸಕಾಲಕ್ಕೆ ಅಲ್ಲಿ ಹಣಸಿಕ್ಕುವ ಉದ್ದೇಶದಿಂದ ಈ ಮಸೂದೆಯನ್ನು ತಂದದ್ದು. ಈ ಮಸೂದೆಯ ಮೇಲೆ ಮಾನ್ಯ ಸದಸ್ಯರು ಮಾಡಿದ ಟೀಕೆಗಳನ್ನು ಸೆಲೆಕ್ಟ್ ಕಮಿಟಿಗೆ ಹೋಗುವ ಕಾಲಕ್ಕೆ ವಿಚಾರ ಮಾಡಲಾಗುತ್ತದೆ. ಆದರೆ ಎಲ್ಲ ಸದಸ್ಯರೂ ಕೊಟ್ಟಂಥ ಸಲಹೆಗಳೆಲ್ಲವನ್ನೂ ಕಮಿಟಿಯೊಳಗೆ ವಿಚಾರ ಮಾಡುತ್ತಾರೋ ಇಲ್ಲವೋ ಎಂಬ ಒಂದು ಸಂಶಯವನ್ನು ಕೆಲವು ಸದಸ್ಯರು ವ್ಯಕ್ತಪಡಿಸಿದರು. ಕೆಲವು ಸಂದರ್ಭಗಳಲ್ಲಿ ಆ ರೀತಿ ಹೇಳುವುದು ಸರಿಯಲ್ಲ. ಅಂತಹ ಆರೋಪಣೆಗಳು ಸದಸ್ಯರಿಂದ ಯಾವುದೂ ಆಗದ ರೀತಿಯಲ್ಲಿ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಅದನ್ನೂ ಕೂಡ ಸೆಲೆಕ್ಟ್ ಕಮಿಟಿಯಲ್ಲಿ ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಇದಲ್ಲದೆ ನಾವು ಬಡ್ಜೆಟ್ಟಿನೊಳಗೆ ಈ ಬಗ್ಗೆ ಎಷ್ಟು ಹಣ ಕೊಡಬೇಕು ಎಂಬುದನ್ನು ಗೊತ್ತುಮಾಡದಿದ್ದರೆ, ಜನರಿಗೆ ಒಳ್ಳೆಯದಾಗುವುದಿಲ್ಲ, ನಿಜವಾಗಿಯೂ ನಿರುದ್ಯೋಗತನ ಕಡಮೆಯಾಗುವುದಿಲ್ಲ. ಸಣ್ಣ ಸಣ್ಣ ಕೈಗಾರಿಕೆಗಳು ಹೆಚ್ಚಿಗೆ ಬೆಳೆಯಬೇಕಾಗಿದ್ದರೆ ಬಡ್ಜೆಟ್ಟಿನೊಳಗೆ ಆ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಇಷ್ಟಿಷ್ಟು ಹಣವನ್ನೊದಗಿಸಬೇಕೆನ್ನುವ ವ್ಯವಸ್ಥೆಮಾಡುವುದು ಸರಿಯೆಂದು ನನಗೆ ಕಾಣುತ್ತದೆ. ಅದನ್ನು ಬಿಟ್ಟು ದೊಡ್ಡ ದೊಡ್ಡ ಕೈಗಾರಿಕೆಯ ಉದ್ಯೋಗದ ಸಲುವಾಗಿ ಇಷ್ಟು ಹಣವೆಂದು ಪ್ರೊವೈಡ್ ಮಾಡುವುದು ಸರಿಯಲ್ಲ. ಇದಲ್ಲದೆ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಮತ್ತು ಬೇರೆ ಕಾರ್ಪೊರೇಷನ್‌ಗಳಿಗೆ ಈ ದೃಷ್ಟಿಯಿಂದ ಹಣವನ್ನು ಎಲ್ಲಾ ಕಡೆಗೂ ಕೊಡುವಂತೆ ಸೂಚನೆಕೊಟ್ಟು ಅಂತಹ ಉದ್ಯೋಗಗಳನ್ನು ಪ್ರಾರಂಭ ಮಾಡಬಹುದು. ಚಿಕ್ಕ ಪುಟ್ಟ ಉದ್ಯೋಗಗಳಿಗೆ ಈ ರೀತಿ ವ್ಯವಸ್ಥೆ ಮಾಡುವ ಪದ್ಧತಿ ಸರಿಯೆಂದು ನನಗೆ ತೋರುತ್ತದೆ. ಇದೆಲ್ಲವೂ

ಕಾನೂನು ಆಗುವುದರೊಳಗೆ ವಿಚಾರಮಾಡಲಾಗುತ್ತದೆ. ಇನ್ನು ಕೆಲವು ಶಬ್ದ ದೋಷಗಳು ಈ ಮಸೂದೆಯಲ್ಲಿ ಅಡಕವಾಗಿವೆ ಎಂದು ಕೆಲವರು ಹೇಳಿದರು. ಮತ್ತು ಕೆಲವು ಸಬ್-ಕ್ಲಾಜುಗಳ ತಿದ್ದುಪಡಿಗಳ ಮೇಲೆ ಕೆಲವು ಸೂಚನೆಗಳನ್ನೂ ಸಹ ಮಾಡಿದರು. ಇವೆಲ್ಲ ಸೂಚನೆಗಳನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವ ಕಾಲಕ್ಕೆ ನಾವು ವಿಚಾರಮಾಡಿ ಯುಕ್ತವಾದ ತಮ್ಮ ಸಲಹೆಗಳನ್ನು ಮಸೂದೆಯಲ್ಲಿ ಇನ್ ಕಾರ್ಪೊರೇಟ್‌ಮಾಡಿ ಸೆಲೆಕ್ಟ್ ಕಮಿಟಿಯ ವರದಿ ಬಂದ ಅನಂತರ ಎಲ್ಲ ತರಹದ ಭಿನ್ನಾಭಿಪ್ರಾಯಗಳನ್ನು ಚರ್ಚೆಮಾಡಿ ಕೊನೆಗೆ ಕಾನೂನು ಆಗಲಿಕ್ಕೆ ಅವಕಾಶ ಸಿಕ್ಕುತ್ತದೆಂದು ನಾನು ಹೇಳುತ್ತೇನೆ. ಬೋರ್ಡ್ ಆಫ್ ಇಂಡಸ್ಟ್ರೀಸ್ ಬಗ್ಗೆ ಕೆಲವು ಸ್ನೇಹಿತರು ಕೆಲವು ಅಂಶಗಳನ್ನು ಸೂಚನೆಮಾಡಿದರು. ಅಸೆಂಬ್ಲಿ ಕಾಂಗ್ರೆಸ್ ಪಕ್ಷದವರು ಬೇರೆ, ಉಳಿದವರೇ ಬೇರೆ ಬೇರೆ ಎಂಬುದಾಗಿ ವಾದಿಸಿದರು. ಯಾವ ಕಾಲಕ್ಕೂ ಆ ರೀತಿ ನನ್ನ ಮಾನ್ಯ ಸ್ನೇಹಿತರು ತಿಳಿಯಬಾರದು. ಎಲ್ಲ ಪಕ್ಷಗಳವರೂ ಒಂದೇ. ಎಲ್ಲ ಪಕ್ಷಗಳಲ್ಲಿರುವವರೂ ಬೋರ್ಡಿನಲ್ಲಿರಬೇಕು ಎಂಬುದೇ ನನ್ನ ಆಶಯ. ಈ ಮಸೂದೆಗೆ ಸಂಬಂಧಪಡುವ ಸೆಲೆಕ್ಟ್ ಕಮಿಟಿಯೊಳಗಾಗಲಿ ಬೋರ್ಡ್ ಆಫ್ ಇಂಡಸ್ಟ್ರೀಸ್‌ನಲ್ಲಾಗಲಿ ಒಂದೇ ಪಕ್ಷದವರು ಇರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈ ಸಮಿತಿಯನ್ನು ರಚಿಸಬೇಕೆಂಬ ಭಾವನೆ ಸರ್ಕಾರಕ್ಕಿಲ್ಲ. ಅಸೆಂಬ್ಲಿಯ ಸದಸ್ಯರಿಗೆ ಕೈಗಾರಿಕೆಗಳಲ್ಲಿ ಅನುಭವ, ಜ್ಞಾನ ಲ್ಲವೆಂದು ನಾನು ತಿಳಿದುಕೊಂಡಿಲ್ಲ. ಕೇವಲ ಹೊರನಗಿವರೇ ಇದರಲ್ಲಿ ಸದಸ್ಯರಾಗಿರಬೇಕೆಂಬುದನ್ನು ಸಹ ನಾನು ಒಪ್ಪಲಾರೆ. ಅಸೆಂಬ್ಲಿಯಿಂದಲೂ, ಕೌನ್ಸಿಲ್‌ನಿಂದಲೂ ಕೆಲವು ಸದಸ್ಯರು ಬೋರ್ಡಿನಲ್ಲಿ ಇದ್ದಾರೆಂಬುದಾಗಿ ವರ್ತಿಸಬೇಕು. ಏಕೆಂದರೆ ಅಸೆಂಬ್ಲಿಯಲ್ಲಿರುವ ಅನೇಕ ಸದಸ್ಯರು ಅನೇಕ ವರ್ಷಗಳಿಂದ ಕೆಲಸಮಾಡಿ ತಜ್ಞರಾಗಿದ್ದಾರೆ. ಆ ದೃಷ್ಟಿಯಿಂದ ಎಲ್ಲ ಪಕ್ಷದವರಿಗೂ ಇದರಲ್ಲಿ ಅವಕಾಶ ಸಿಕ್ಕುತ್ತದೆ. ಇದನ್ನೂ ಕೂಡ ಸೆಲೆಕ್ಟ್ ಕಮಿಟಿಯಲ್ಲಿ ವಿಚಾರ ಮಾಡಲಿಕ್ಕೆ ಯಾವತರಹದ ಅಭ್ಯಂತರವೂ ಕಾಣಲಿಲ್ಲ.

ಈ ದೃಷ್ಟಿಯಿಂದ ಇವೊತ್ತಿನ ದಿವಸ ಹೆಚ್ಚಿಗೆ ಚರ್ಚೆ ಮಾಡುವ ಆವಶ್ಯಕತೆಯಿಲ್ಲ. ಮಾನ್ಯ ಸದಸ್ಯರುಗಳು ಕೊಟ್ಟಿರುವ ಕೆಲವು ಉಪಯುಕ್ತ ಸೂಚನೆಗಳಿಗೆ ಗಮನ ಕೊಟ್ಟು ಅವನ್ನು ಸೆಲೆಕ್ಟ್ ಕಮಿಟಿಯ ಮುಂದಿಟ್ಟು ಪರಿಶೀಲನೆ ಮಾಡಿ ಪುನಃ ಈ ಬಿಲ್ಲನ್ನು ತಮ್ಮ ಮುಂದೆ ಇಡುತ್ತೇವೆ. ಆ ಕಾಲಕ್ಕೆ ಸದಸ್ಯರುಗಳು ಹೆಚ್ಚಿಗೆ ಚರ್ಚೆ ಮಾಡಬಹುದಾಗಿದೆ. ಆದ್ದರಿಂದ ಈಗ ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಲು ಸದಸ್ಯರು ಸಮ್ಮತಿಸಬೇಕೆಂದು ಹೇಳುತ್ತೇನೆ.

Mr. SPEAKER.—The question is:

"That the Mysore State Aid to Industries Bill, 1958, be taken into consideration."

The motion was adopted.

Sri B. D. JATTI.—Sir, I beg to move:

"That the Mysore State Aid to Industries Bill, 1958, be referred to a Joint Select Committee of this House and the Legislative Council, consisting of a total number of 18 members (12 from this House and 6 from the Legislative Council), that the concurrence of the Legislative Council be obtained therefor, and that the following members of this House shall be members of the Joint Select Committee, namely—

Shriyuths—

1 C. S. Hulkoti
2 K. S. Suryanarayana Rao
3 S. R. Ramaiah
4 Smt. Vijaya Raghavendra Rao.
5 T. Tare Gowda
6 Smt. Lakshmidevi Ramanna
7 N. G. Narasimhe Gowda
8 M. Ramappa
9 Sri B. G. Khot
10 A. M. Basave Gowda
11 S. D. Gaonkar
12 T. Hanumiah

and that the Joint Select Committee present its report during the current session."

Mr. SPEAKER.—Motion moved:

"That the Mysore State Aid to Industries Bill, 1958, be referred to a Joint Select Committee of this House and the Legislative Council, consisting of a total number of 18 members (12 from this House and 6 from the Legislative Council), that the concurrence of the Legislative Council be obtained therefor, and that the following members of this House shall be members of the Joint Select Committee, namely—

Shriyuths—

1 C. S. Hulkoti
2 K. S. Suryanarayana Rao
3 S. R. Ramaiah
4 Smt. Vijaya Raghavendra Rao
5 T. Tare Gowda
6 Smt. Lakshmidevi Ramanna
7 N. G. Narasimhe Gowda
8 M. Ramappa
9 B. G. Khot
10 A. M. Basave Gowda
11 S. D. Gaonkar
12 T. Hanumiah

and that the Joint Select Committee present its report during the current session."

Sri M. C. NARASIMHAN.—I would like to move an amendment to the motion. I suggest that the name of Sri J. B. Mallaradhya be included in the list of members proposed for the Joint Select Committee.

Sri B. D. JATTI.—His name can also be included.

Mr. SPEAKER.—Instead of treating it as an amendment, I will add his name in the list.

Sri B. G. KHOT.—I suggest that my name be dropped.

Mr. SPEAKER.—I will put the motion to vote. The question is :

"That the Mysore State Aid to Industries Bill, 1958, be referred to a Joint Select Committee of this House and the Legislative Council, consisting of a total number of 18 members (12 from this House and 6 from the Legislative Council), that the concurrence of the Legislative Council be obtained therefor, and that the following members of this House shall be members of the Joint Select Committee, namely—

Shriyuths—
1 C. S. Hulkoti
2 K. S. Suryanarayana Rao

Shriyuths—
3 S. R. Ramaiah
4 Smt. Vijaya Raghavendra Rao.
5 T. Tare Gowda
6 Smt Lakshmidevi Ramanna
7 N. G Narasimhe Gowda
8 M. Ramappa
9 J. B. Mallaradhya
10 A. M. Basave Gowda
11 S. D. Gaonkar
12 T. Hanu iah

and that the Joint Select Committee present its report during the current session."

The motion was adopted.

Mr. SPEAKER.—As required by Rule 90-(1), the Chief Minister is nominated as a member of the Joint Select Committee.

The House will now adjourn and meet to-morrow at One of the Clock.

The House adjourned at Twelve Minutes past Six of the Clock to meet again at One of the Clock on Wednesday, the 5th November 1958.

WD 1927—GPB—900—6-1-59